## ನಾವಿಬ್ಬರು ನಾವಿಬ್ಬರೇ

‘ನಾವಿಬ್ಬರು ನಾವಿಬ್ಬರೇ’ (ಚೈತ್ರಿಕಾ ನಾಯ್ಕ ಹರ್ಗಿ, ಮಾ. 3) ಲೇಖನ ಚಿಂತನಾರ್ಹವಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈಗಾಗಲೇ DINK (Double Income No Kid) ಕುಟುಂಬಗಳು ಇವೆ. ನಮ್ಮ ದೇಶದಲ್ಲಿಯೂ ಈ ಹವಾ ಬೀಸುತ್ತಿದೆ. ಸುಶಿಕ್ಷಿತ ಮತ್ತು ಆರ್ಥಿಕವಾಗಿ ಸುಭದ್ರವಾಗಿರುವ ದಂಪತಿಗಳೇ ಈ ಆಯ್ಕೆಯನ್ನು ಮಾಡಿಕೊಳ್ಳುತ್ತಿರುವುದು ವಿಪರ್ಯಾಸ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಲೇಖನ ಓದಿದೆ. ಆದರೆ ಎಲ್ಲೂ ಈ ಸಮಸ್ಯೆಗೆ ಆರ್ಥಿಕ ಬಿಕ್ಕಟ್ಟುಗಳೂ ಕಾರಣ ಎಂಬುದನ್ನು ಹೇಳಿಲ್ಲ. ಜೊತೆಗೆ ಸಂತಾನದ ಸಂತೋಷ ಮತ್ತು ಮುಪ್ಪಿನ ಕಾಲದ ಆಸರೆಯ ಮಹತ್ವವನ್ನು ಇಲ್ಲಿ ಮನಗಾಣಿಸಿಲ್ಲ. ಹೀಗಾಗಿ ಆ ಕ್ಷಣದ ಆರಾಮವನ್ನಷ್ಟೆ ಗಮನಿಸಿದವರ ವಾದ ಇದಾಗಿದೆ ಅಂತ ಅನ್ನಿಸಿತು.

–ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಮಕ್ಕಳ ಹೆರದೆಯೂ ಮಹಿಳೆ ಪರಿಪೂರ್ಣ ಜೀವನ ನಡೆಸಬಹುದು ಎಂದು ಲೇಖನದಲ್ಲಿ ಹೇಳಲಾಗಿದೆ. ಈ ಕಲ್ಪನೆ ತಾತ್ಕಾಲಿಕ ಸಂತೃಪ್ತಿಯನ್ನೇನೋ ನೀಡಬಹುದು. ಕಾಲ ಕಳೆದಂತೆ ಅನೇಕ ವಿಚಾರಗಳಲ್ಲಿ ಮಕ್ಕಳ ಅಗತ್ಯ ಗೋಚರಕ್ಕೆ ಬರುತ್ತದೆ. ಹೆಣ್ಣುಮಕ್ಕಳು ಹೆರಬೇಕು ಎಂದು ‘ಹೇರಿಕೆ’(?) ಮಾಡುವುದು ತಪ್ಪು ಎಂದು ಯಾಕೆ ಯೋಚಿಸಬೇಕು? ಜೀವಶಾಸ್ತ್ರದ ಪ್ರಕಾರ ಗಂಡಸು ಹೆರಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಹೀಗೇ ಯೋಚಿಸಿದರೆ, ‘ತಂದೆ ತಾಯಿ’ ಎಂಬ ಹೆಸರೇ ಇಲ್ಲವಾಗಿ ಕ್ರಮೇಣ ಮನುಷ್ಯ ಕುಲವೇ ನಾಶವಾಗಬಹುದು.

–ಪ್ರಕಾಶ ಮೂಲ್ಕಿ, ಕುಳಾಯಿ

ಲೇಖನ ಪ್ರಸಕ್ತ ಸಮಾಜದ ಹೊಸ ವಿಚಾರಧಾರೆಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದೆ. ಪರಿಪೂರ್ಣ ಜೀವನಕ್ಕೆ ಹಾಗು ಹೆಣ್ಣಿನ ಜೀವನ ಸಾರ್ಥಕವಾಗಲು ತಾಯ್ತನವೇ ಮಾನದಂಡವೆಂಬ ಮನೋಧರ್ಮವನ್ನು ಬದಲಾಯಿಸಲು ಲೇಖಕಿ ಸಮರ್ಥವಾಗಿ ವಿಷಯ ನಿರೂಪಿಸಿದ್ದಾರೆ. ಮನೆ–ಕಚೇರಿಗಳಲ್ಲಿ ದುಡಿದು ಹೈರಾಣಾಗಿ ಮಕ್ಕಳ ಪಾಲನೆಗೆ ಸಮಯ ನೀಡಲಾಗುತ್ತಿಲ್ಲವೆಂದು ಕೊರಗುವ ತಾಯಂದಿರಿಗೆ ಈ ವಿಚಾರ ಸತ್ಯ ದರ್ಶನ ಮಾಡಿಸುತ್ತದೆ.

–ಮಂಜುಳ ಸಿ.ಎಸ್, ಹಾಸನ

ಇದೊಂದು ಸಾಮಾಜಿಕ ಕಳಕಳಿಯಿಲ್ಲದ ಬರಹ. ಸಮಾಜದ ಎಷ್ಟು ಮಂದಿ ಈ ನಿಲುವನ್ನು ತಳೆದಿದ್ದಾರೆ; ಅದರ ಅಂಕಿ ಅಂಶ ಇಲ್ಲ. ಇದರ ದುಷ್ಪರಿಣಾಮಗಳ ಬಗ್ಗೆ ಬರೆಯದಿರುವುದು ವಿಷಾದನೀಯ. ಈ ಲೇಖನ, ‘ಮಕ್ಕಳ ಮಾಡಿಕೊಳ್ಳಿ’ ಎಂದು ಬಲವಂತ ಮಾಡುವ ಪೋಷಕರ ಬಾಯಿ ಮುಚ್ಚಿಸುವಂತಿದೆ. ವಯಸ್ಸಾದ ಮೇಲೆ ಅವರೇ ಪಶ್ಚಾತ್ತಾಪ ಪಡುತ್ತಾರೆ.

–ನಾಗರಾಜ ಮಾದೇಗೌಡ, ಕನಕಪುರ



ಈಗಾಗಲೇ ಹೆಣ್ಣಿನ ಫಲವಂತಿಕೆ ಕಡಿಮೆಯಾಗಿದೆ. ಮದುವೆ ವಯಸ್ಸು ಹೆಚ್ಚಾಗಿದೆ. ಇನ್ನು ಮಕ್ಕಳೇ ಬೇಡವೆಂದು ನಿರ್ಧಾರ ಮಾಡಿದರೆ ಮುಂದಿನ ಪರಿಣಾಮ ಏನಾಗಬಹುದು? ಈಗ ಜಪಾನ್‌ನಲ್ಲಿ ವಯೋವೃದ್ಧರ ಸಂಖ್ಯೆ ಜಾಸ್ತಿ ಆಗಿ ಅಲ್ಲಿನ ಸರಕಾರ 2ರಿಂದ 3 ಮಕ್ಕಳನ್ನು ಮಾಡಿಕೊಳ್ಳಿ ಎಂದು ಪ್ರೋತ್ಸಾಹ ಮಾಡುತ್ತಿದೆ. ಮುಂದೆ ನಮ್ಮ ದೇಶ ಕೂಡ ಆ ಹೆಜ್ಜೆ ಇಡಬಹುದು.

–ಭಾರತೀ ಗಂಗಾಧರ್

ಈ ಕಲುಷಿತ ಸಮಾಜದಲ್ಲಿ ನಮ್ಮ ಮುಂದಿನ ಪೀಳಿಗೆಗಳು ಬಲಿಯಾಗಬೇಕೇ? ಸಾಮಾಜಿಕ ಭದ್ರತೆಯಿಲ್ಲದ ಈ ಸಮಾಜದಲ್ಲಿ ಅವರು ಮಾಡುವುದಾದರೂ ಏನು? ಹಾಗೆಂದ ಮಾತ್ರಕ್ಕೆ, ನಾವು ಎಲ್ಲಾ ಸಮಾಜದ ಮೇಲೆ ಹಾಕಿ ಸುಮ್ಮನಿರಲು ಸಾಧ್ಯವಿಲ್ಲ. ಹಾಗಾದರೆ ಹೆಣ್ಣು ಮಕ್ಕಳ ಪರಿಸ್ಥಿತಿ ಏನು? ಆಕೆಗೂ ತಾಯ್ತನ, ಹೆಣ್ತನ ಬೇಡವೇ? ಮುಂದೆ ದೇಶಕ್ಕಾಗಿ, ಸಮಾಜಕ್ಕಾಗಿ ದುಡಿಯುವ ಕೈಗಳು ಬೇಡವೇ?

–ಗಾಯಿತ್ರಿ ದೇವಿ ಎಂ.ಎಸ್., ಬೆಂಗಳೂರು

### ಅದ್ಭುತ ಲೇಖನಗಳು

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಅದ್ಭುತವಾಗಿವೆ. ಪ್ರಕೃತಿ, ಡ್ರಾಗನ್ ಬ್ಲಡ್ ಟ್ರೀ, ಪ್ರಾಗ್ ನಗರ, ಶಿಲ್ಪಗಳ ಭಾಷ್ಯ, ಮೆಟಾವರ್ಸ್ ಮಾಯಾಜಾಲ, ರೋಮಿನತ್ತ, ಮೆಟಾವರ್ಸ್ ಎಂಗೇಜ್‌ಮೆಂಟ್, ಜೇಮ್ಸ್‌ಬಾಂಡ್ ಎಲ್ಲವೂ ಒಂದಕ್ಕಿಂತ ಇನ್ನೊಂದು ಅದ್ಭುತ ಲೇಖನಗಳು. ‘ಸುಧಾ’ ಹೀಗೆಯೇ ಎಲ್ಲರ ಮೆಚ್ಚುಗೆಯ ವಾರಪತ್ರಿಕೆಯಾಗೇ ಇರಲಿ.

–ವಿಜಯ ಜಿ., ಬೆಂಗಳೂರು

### ವಿಜ್ಞಾನ ದೇಗುಲದ ಆರಾಧಕರು

‘ವಿಜ್ಞಾನ ದೇಗುಲದ ಆರಾಧಕರು’ (ಪ್ರವೀಣ ಕುಲಕರ್ಣಿ, ಮಾ. 3) ಲೇಖನ ಚೆನ್ನಾಗಿತ್ತು. ‘ಭಾರತೀಯ ವಿಜ್ಞಾನ ಸಂಸ್ಥೆ,’ ಆವರಣದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾಗಿರುವುದು ನಿಜಕ್ಕೂ ಒಳ್ಳೆಯ ಕೆಲಸ. ಬಡವ ಬಲ್ಲಿದರೆನ್ನದೆ ಎಲ್ಲರಿಗೂ ಉತ್ತಮ ಚಿಕಿತ್ಸೆ ದೊರೆಯಲಿದೆ ಎಂಬ ಆಶಾಭಾವನೆ.

–ತಿಮ್ಮರಾಜು, ದಾವಣಗೆರೆ

ನಾವಿರುವ ಸಮಾಜದ ಬಗ್ಗೆ ಕಳಕಳಿ ಮತ್ತು ವೈದ್ಯಕೀಯ ಕ್ಷೇತ್ರದ ಸಂಶೋಧನೆ ಎಷ್ಟೊಂದು ಪ್ರಮುಖಅನ್ನುವುದಕ್ಕೆ ಬಾಗ್ಚಿ ಮತ್ತು ಪಾರ್ಥಸಾರಥಿ ದಂಪತಿ ಒಳ್ಳೆಯ ಉದಾಹರಣೆ. ಅವರ ಈ ಕೆಲಸ, ಸಿರಿವಂತರ ಇನ್ನೊಂದು ಮುಖ ತೋರಿಸಿದಂತಿದೆ. ಈ ಲೇಖನ, ಹಣ ಇರುವ ಅನೇಕರಿಗೆ ಸಮಾಜಮುಖಿ ಕಾರ್ಯಗಳನ್ನು ಮಾಡುವುದಕ್ಕೆ ಪ್ರೇರೇಪಿಸಲಿ.

–ಗುರುರಾಜ ಜೋಶಿ, ಬೆಂಗಳೂರು

### ಬಲಿದಾನ

‘ಬಲಿದಾನ’ (ಮೂಲ: ಚಿನುವಾ ಅಚಬೆ, ಕನ್ನಡಕ್ಕೆ: ಬಸು ಬೇವಿನಗಿಡದ) ಕಥೆ ಚೆನ್ನಾಗಿತ್ತು. ಜನ ಸಿಡುಬು ರೋಗದಿಂದ ತತ್ತರಿಸಿ, ಮನೆಯಿಂದ ಹೊರಗೆ ಹೆಜ್ಜೆ ಇಡಲು ಭಯಪಡುವ ಸ್ಥಿತಿ ಮತ್ತು ಬಿಳಿಯರ ಆಗಮನದಿಂದಾಗುವ ಬದಲಾವಣೆ ಮತ್ತು ಅಲ್ಲಿನ ನಂಬಿಕೆಗಳು ಅದ್ಭುತವಾಗಿ ಮೂಡಿ ಬಂದಿವೆ. ಅನುವಾದವೂ ಅಷ್ಟೇ ಉತ್ತಮವಾಗಿ ಮೂಡಿಬಂದಿದೆ.

–ಧನ್ಯಶ್ರೀ ಅಮ್ಮುಂಜ, ಸುಳ್ಯ

### ಬಿಗ್ ಫುಟ್ ಕನ್ನಡಿ

‘ಗೋವಾ ಇತಿಹಾಸಕ್ಕೆ ಬಿಗ್ ಫುಟ್ ಕನ್ನಡಿ’ (ಗೌರಿ ಚಂದ್ರಕೇಸರಿ, ಮಾ.3) ಲೇಖನ ತುಂಬಾ ಚೆನ್ನಾಗಿತ್ತು. ಪೋರ್ಚುಗೀಸರು ಕಾಲಿಡುವ ಮುನ್ನ ಗೋವಾ ಹೇಗಿತ್ತು ಎಂಬುದರ ಸಮಗ್ರ ಚಿತ್ರಣ ನೀಡುವ ಈ ಲೇಖನ, ಬಯಲು ಸಂಗ್ರಹಾಲಯದ ಸೊಗಡನ್ನೂ ಪರಿಚಯಿಸುತ್ತದೆ.

–ಪಿ. ಜಯವಂತ ಪೈ, ಕುಂದಾಪುರ

### ಆಂಡ್ರಾಯ್ಡ್ 13

‘ಆಂಡ್ರಾಯ್ಡ್ 13’ (ಶಶಿಕುಮಾರ್ ಸಿ., ಮಾ. 3) ತಂತ್ರಜ್ಞಾನ ಲೇಖನ ಓದಿದೆ. ಹೊಸ ಆವೃತ್ತಿಯ ಆಗಮನ ಹೊಸ ಸೌಲಭ್ಯಗಳನ್ನು, ಹೆಚ್ಚಿನ ಭದ್ರತೆ ನೀಡುವುದು ಸಂತಸದ ಸಂಗತಿ. ಆದರೆ ಈ ಕಾರ್ಯಾಚರಣೆಯ ತಂತ್ರಾಂಶಗಳು, ಅತಿಹೆಚ್ಚಿನ ದಾಸ್ತಾನು ಜಾಗ ಬಯಸುತ್ತದೆ. ತಯಾರಕರು ಈಗಾಗಲೇ ಮಾಡಿರುವ ಫೋನ್‌ಗಳಿಗೆ ಈ ಆವೃತ್ತಿ ಒದಗಿಸಿರುವುದರಿಂದ ಗ್ರಾಹಕರು ಮತ್ತೆ ಹೊಸ ಫೋನ್ ಖರೀದಿಸಬೇಕು. ಇದಕ್ಕೆ ಕೊನೆ ಎಂದು?

–ರಂಗನಾಥ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in